## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ. ನಂ. 1996/22**

ಸಿ.ಡಬ್ಲ್ಯು 7
ಪಿ.ಡಬ್ಲ್ಯು 3

| | | |
|---|---|---|
| ಸಾಕ್ಷಿದಾರರ ಹೆಸರು | – | ಪ್ರಣೀತ್ ಹೆಗಡೆ |
| ತಂದೆಯ ಹೆಸರು | – | ಪ್ರಕಾಶ ಹೆಗಡೆ |
| ವಯಸ್ಸು | – | 21 ವರ್ಷ |
| ಉದ್ಯೋಗ | – | ವಿದ್ಯಾರ್ಥಿ |
| ವಾಸ್ತವ್ಯ | – | ಕುಮಟಾ |

(ಇಂದು ದಿನಾಂಕ 25-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನನಗೆ ಆರೋಪಿತರ ಮುಖ ಪರಿಚಯ ಇರುತ್ತದೆ. ಚಾ.ಸಾ. 1 ಹಾಗೂ 6, 8 ರಿಂದ 15 ರವರು ನನ್ನ ಸ್ನೇಹಿತರು. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಲೀ, ಅಡ್ಡಗಟ್ಟಿ ಕಲ್ಲಿನಿಂದ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿರುವುದಾಗಲೀ ಇರುವುದಿಲ್ಲ. ನಮ್ಮ ಮತ್ತು ಆರೋಪಿತರು ನಡುವೆ ಗಲಾಟೆಯಾಗಿರುವುದಾಗಿ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಫಿರ್ಯಾದು ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ ಮತ್ತು

ಎಲ್ಲಿ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ಯಾವುದೇ ಗಲಾಟೆಯ ವಿಚಾರದಲ್ಲಿ ನಾನು ದೂರನ್ನು ಬರವಣಿಗೆ ಮಾಡಿರುವುದಿಲ್ಲ.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ಸಹಿ ತಮ್ಮದೇ ಆಗಿರುವುದಾಗಿ ಒಪ್ಪಿದ್ದು, ಅದನ್ನು ನಿ.ಪಿ.3 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ</u>**

ದಿನಾಂಕಃ 13–04–2022 ರಂದು ರಾತ್ರಿ ಕುಮಟಾದ ಮಣಕಿ ಮೈದಾನದಲ್ಲಿ ನಡೆಯುತ್ತಿದ್ದ ಕುಮಟಾ ಹಬ್ಬದ ಕಾರ್ಯಕ್ರಮವನ್ನು ನೋಡಿಕೊಂಡು ನಾನು ಹಾಗೂ ಚಾ.ಸಾ. 1 ಮತ್ತು 7 ರಿಂದ 10 ರವರು ಹಿಂದಿರುಗಿ ಹೋಗುತ್ತಿದ್ದಾಗ ಕಾಮತ್ ಹೋಟೆಲ್ ಎದುರುಭಾಗದ ಡಿಗ್ರಿ ಕಾಲೇಜಿನ ಕ್ರಾಸ್ ಹತ್ತಿರ ಆರೋಪಿತರು ಸೇರಿಕೊಂಡು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ನಾವು ಯಾಕೆ ಬೈಯುತ್ತೀರಿ ಎಂದು ಕೇಳಿದಾಗ ಅವರೆಲ್ಲರೂ ನಮ್ಮನ್ನು ಅಡ್ಡಗಟ್ಟಿ ತಡೆದು ಅಲ್ಲಿಯೇ ಇದ್ದ ಕಲ್ಲಿನಿಂದ ಚಾ.ಸಾ.1 ರವರ ತಲೆಗೆ ಹಲ್ಲೆ ಮಾಡಿದರು ಎಂದರೆ  ಸರಿಯಲ್ಲ. ಅಲ್ಲದೇ ಆರೋಪಿತರು ನನಗೆ ಹಾಗೂ ಚಾ.ಸಾ. 7 ರಿಂದ 10 ರವರಿಗೂ ಸಹ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮನ್ನು ಹೊಡೆಯುವುದನ್ನು ನೋಡಿ ಜನರು ಬರುವುದನ್ನು ಕಂಡು ಆರೋಪಿತರು ಜೀವಸಹಿತ ಉಳಿಸುವುದಿಲ್ಲವೆಂದು ಜೀವ ಬೆದರಿಕೆಯನ್ನು ಹಾಕಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಹೇಳಿಕೆಯನ್ನೂ ಸಹ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಮ್ಮ ಮತ್ತು ಆರೋಪಿತರ ನಡುವೆ

ಘಟನೆಯಾಗಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಾಗೂ ಚಾ.ಸಾ. 1 ಮತ್ತು 7 ರಿಂದ 14 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅಡ್ಡಗಟ್ಟಿ ತಡೆದು ಹಲ್ಲೆ ಮಾಡಿ ಜೀವ ಬೆದರಿಕೆಯನ್ನು ಹಾಕಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆ ಆಗಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿತರ ಪರ ಶ್ರೀಮತಿ ಪಿ.ಎಚ್. ಕೆ. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ